ಶ್ರೀ ಎಸ್. ಕರಿಯಪ್ಪನವರು.—ಮರಳವಾಡಿ ಕೆರೆ ಅಚ್ಚುಕಟ್ಟಿನಲ್ಲಿ ಬಾಕಿಯಿರುವ ಒಟ್ಟು ಪೊಬಲಗೆಷ್ಟು ?

*ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—

ರೂ. 18,942-14-9.

ಶ್ರೀ ಎಸ್. ಕರಿಯಪ್ಪನವರು. —ಇಷ್ಟೊಂದು ಪೊಬಲಗು 15 ವರ್ಷಗಳಿಂದ ಒಂದೇ ಸಮನಾಗಿ ನಿಂತಿದೆ. ಇಲ್ಲಿಯವರೆಗೆ ಅದನ್ನು ತಗ್ಗಿಸುವುದಕ್ಕೆ ಏನಾದರೂ ಪ್ರಯತ್ನ ನಡೆದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಇದು ನಾನಾ ಕಾರಣಗಳಿಂದ ನಿಂತುಬಂದಿದೆ. ಇದಕ್ಕೆ ಸಂಬಂಧಪಟ್ಟ ಎರಡು ವರ್ಷದ ಹಿಂದಿನ ರಿಕಾರ್ಡು ಎಲ್ಲೋ ಬಿದ್ದಿತ್ತು. 1949ನೆಯ ಇಸವಿ ಡಿಸೆಂಬರಿನಲ್ಲಿ ಮತ್ತು 1950ನೆಯ ಇಸವಿ ಏಪ್ರಿಲ್‌ನಲ್ಲಿ ಅದನ್ನು ತನಿಖೆಮಾಡಿ ಕಳುಹಿಸಿಕೊಟ್ಟಿದೆ. ಇನ್ನು ಕೆಲವು ದಿವಸಗಳಲ್ಲಿ ಆರ್ಡರಾಗಬಹುದು.

ಶ್ರೀ ಎಸ್. ಕರಿಯಪ್ಪನವರು.—ಏನು ಆರ್ಡರಾಗಬಹುದು ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ರಿಮಿಶನ್ ಕೊಡಬಹುದು ಎಂದು ಅಭಿಪ್ರಾಯಪಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಇಷ್ಟು ಡಿಮ್ಯಾಂಡೂ ಕೂಡ ರಿಮಿಶನ್ ಆಗಬಹುದೆ ?

The Hon'ble Sri H. SIDDAIYA.—Very likely.

Reduction of grant for Temperance Federation in Kolar Gold Field.

*Q.—84. **Sri M. MUNISWAMY** (Kolar District—Depressed Class).—

Will the Government be pleased to state :—

the reasons for the reduction of grant from Rs. 3,500 to Rs. 2,000 which was hitherto provided to the Temperance Federation, Kolar Gold Field ?

A.—**The Hon'ble Sri H. SIDDAIYA** (Minister for Revenue and Excise).—

It was reduced mainly for reasons of economy,

Sri H. C. LINGA REDDY (Kolar District—General).—What is the work which the Temperance Federation is doing in the State ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಪ್ರಚಾರ ಮಾಡುತ್ತಿದ್ದಾರೆ. ಕುಡಿಯಬಾರದು, ಕುಡಿಯುವುದರಿಂದ ಹಾನಿಯೊಗುತ್ತದೆ ಎಂದು ಪ್ರಚಾರಮಾಡುವುದರಿಂದ ಸ್ವಲ್ಪ ಕಡಮೆಯೊಗಬಹುದು.

Sri H. C. LINGA REDDY.—Is it not necessary that the grant to this Federation should be enhanced after the introduction of Prohibition in the State ?

ಮಾನ್ಯ ಶ್ರೀ ಎಚ್. ಸಿದ್ಧಯ್ಯನವರು.—ಎಕಾನೆಮಿ ದೃಷ್ಟಿಯಿಂದ ಇದನ್ನು ಸ್ವಲ್ಪಕಡಮೆಮಾಡಲಾಗಿದೆ.

Sri M. MUNISWAMY.—If so, is it not better that toddy tapping should be reintroduced in the Kolar Gold Field ?

The Hon'ble Sri H. SIDDAIYA.—That does not arise.

Construction of Jampadahalla Project in Tarikere Taluk.

*Q.—46. **Sri H. M. MALLIKARJUNAPPA** (Chikmagalur District—General).—

Will the Government be pleased to state :—

(*a*) when the estimate to construct the Jampadahalla Project in Tarikere Taluk was prepared ;

(*b*) the amount of the estimate :

(*c*) the number of acres of land that will be irrigated if the project is constructed ;

(*d*) whether any representations were made from the people of Tarikere to take up the Jampadahalla Project ?

A.—**The Hon'ble Sri T. MARIAPPA** (Home Minister).—

(*a*) 1946-47.

(*b*) 24·67 lakhs.

(*c*) 3,800 acres.

(*d*) Yes.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—(b) ಪ್ರಶ್ನೆಗೆ ಉತ್ತರವಾಗಿ 24·67 ಲಕ್ಷ ರೂಪಾಯಿಗಳು ಎಂದು ಹೇಳಿದೆ. ಈ ಅಂದಾಜು ತಯಾರಾಗಿರುವುದು ಯಾವಾಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು;—ಅಂದಾಜು ತಯಾರಾಗಿರುವುದು 1946—47 ರಲ್ಲಿ. ಈಚೆಗೆ 1948—49ರಲ್ಲಿ ಅದು ರಿವೈಜ್ ಆಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—1946-47ರಲ್ಲಿ 24 ಲಕ್ಷ ರೂಪಾಯಿಗಳಿಗೆ ಅಂದಾಜು ತಯಾರಾಗಿತ್ತು, ಅಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲ, 15·80 ಲಕ್ಷ ರೂಪಾಯಿಗಳಿಗೆ ತಯಾರಾಗಿತ್ತು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ಈಗ ರಿವೈಜ್ ಆಗಿರುವುದರ ಪ್ರಕಾರ 10 ಲಕ್ಷ ಹೆಚ್ಚಿದೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—15·80 ಲಕ್ಷ. ಇದ್ದುದು 24·67 ಲಕ್ಷಕ್ಕೆ ರಿವೈಜ್ ಆಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈ ಎರಡು ವರ್ಷಗಳಲ್ಲಿ ಇಷ್ಟು ವ್ಯತ್ಯಾಸವಾಗುವುದಕ್ಕೆ ಕಾರಣವೇನು ?